ಮಗನ ಇಂಗ್ಲಿಷ್ ಮಾತು ಕೇಳಿ ಅಪ್ಪ ದಂಗಾಗಿ ಹೋದ. ‘ಅಲಾ ಮಗನ, ಇಷ್ಟೆಲ್ಲಾ ಕಷ್ಟಾ ಪಟ್ಟು ಕಲಿಸಿದ್ದಕ್ಕ ಭಾಳ ಚೊಲೊ ಮರ್ಯಾದಿ ಕೊಟ್ಟೆಪಾ, ಹಾಂ...’ ಅಂತ ಮನಸಿನ್ಯಾಗನs ನೋವು ತಿನ್ಕೋತs, ‘ಬಾ ಸೂಳೆಮಗನ ಮಾಡ್ತೇನಿ ನಿನಗ’ ಅಂದವ್ನs, ‘ಯಸ್ ಮಾಯ್ ಡಿಯರ್ ಫ್ರೆಂಡ್ಸ್, ಐ ಆಯಾಮ್ ಹಿಜ್ ಹೌಸ್ ಸರ್ವಂಟ್. ಬಟ್ ಹಿಜ್ ಮದರ್ ವಾಜ್ ಮಾಯ್ ಕೀಪ್. ದಿಸ್ ಈಜ್ ದ ಟ್ರುತ್’ ಅನಕೊಂತs ಮಗನ ಮುಖದ ಕಡೆ ಸೈತ ನೋಡಲಾರದನs ಚಕ್ಕಡೀನ ಇನ್ನಷ್ಟು ಜೋರಾಗಿ ಊರ ಕಡೆ ಓಡ್ಸಾಕ್ಹತ್ತಿದ.

ಅಪ್ಪನ ಇಂಗ್ಲಿಷ್ ಮತ್ತ ಅಂವಾ ಹೇಳಿದ ಖರೇ ಮಾತು ಕೇಳಿದ ಡಾ. ಮಲ್ಲೇಶಿ ಮಕಾ ಕಪ್ಪನ ಕಲ್ಲಿನ ಮೂರ್ತಿ ಮ್ಯಾಲ ಎಣ್ಣೀ ಗಸಿ ಮೆತ್ತಿದ್ಹಂಗ ಆದ್ರ, ಇಂಗ್ಲಿಷ್ ಗೆಳ್ಯಾರ ಮಕಾ ಕರೇ ಮಂಗ್ಯಾನಂಗ ಆಗಿದ್ವು!

ಊರು ಊರಿಗೂ ಮೊಬೈಲುಗಳು ಬಂದಮ್ಯಾಲ, ಹಳ್ಳೀ ಜನರ ನಾಲಿಗೀ ಮ್ಯಾಲೂ ಇಂಗ್ಲಿಷ್ ಸಾಕಷ್ಟು ಓಡ್ಯಾಡಾಕ್ಹತ್ತಿದ್ದು ಡಾ. ಮಲ್ಲೇಶಿಗೆ ಗೊತ್ತs ಇರ್ಲಿಲ್ಲ!!...

✤

